

## ಸವಾಲುಗಳು ಸಾವಿರ...

ಇಂದಿನ ಕನ್ನಡ ಚಿತ್ರರಂಗ ಎದುರಿಸುತ್ತಿರುವ ಸಮಸ್ಯೆಗಳಿಗೆ ರಾಜಕೀಯ ಇಚ್ಛಾಶಕ್ತಿಯ ಕೊರತೆಯೂ ಒಂದು ಕಾರಣ. ತೆಲುಗು, ತಮಿಳಿನಲ್ಲಿ ಇರುವ ಹಾಗೆ ನಮ್ಮ ಚಿತ್ರರಂಗ ಮತ್ತು ರಾಜಕೀಯ ಪರಸ್ಪರ ಹೊಂದಿಕೊಂಡಿಲ್ಲ. ಅಲ್ಲಾದರೆ ಚಿತ್ರರಂಗದ ಹಲವರು ರಾಜಕೀಯ ಮುಖಂಡರೂ ಆಗಿದ್ದಾರೆ. ಹಾಗಾಗಿ ಅಲ್ಲಿ ಚಿತ್ರರಂಗಕ್ಕೆ ವ್ಯವಸ್ಥಿತ ನೀತಿ ನಿರೂಪಣೆ ಮಾಡಲು ಸಾಧ್ಯವಾಗುತ್ತದೆ. ಆದರೆ ನಮ್ಮಲ್ಲಿ ಹಾಗಿಲ್ಲ. ಇಲ್ಲಿ ಜನರು ರಾಜಕೀಯ ಮತ್ತು ಸಿನಿಮಾವನ್ನು ಬೇರೆ ಬೇರೆಯಾಗಿಯೇ ನೋಡುತ್ತಾರೆ. ಸರ್ಕಾರಗಳೂ ಹೆಚ್ಚು ಆದಾಯ ಬರುವ ಉದ್ದಿಮೆಯತ್ತ ಗಮನಹರಿಸುತ್ತದೆ. ಇಲ್ಲಿ ಚಿತ್ರರಂಗಕ್ಕಿಂತಲೂ ಐಟಿ ಉದ್ಯಮ ದೊಡ್ಡದು. ಅದರಿಂದ ಬರುವ ಆದಾಯ ಹೆಚ್ಚು. ಹಾಗಾಗಿ ಎಲ್ಲೆಲ್ಲಿಂದಲೋ ವೈಟ್‌ಫೀಲ್ಡ್‌ಗೆ ಫ್ಲೈ ಓವರ್ ಮಾಡಬೇಕು ಎಂದು ಯೋಚಿಸುತ್ತಾರೆಯೇ ವಿನಾ ಕನ್ನಡಕ್ಕೆ ಸರ್ಕಾರದಿಂದ ನಾಲ್ಕು ಚಿತ್ರಮಂದಿರ ಕಟ್ಟಿಸಿಕೊಡೋಣ ಎಂದು ಯೋಚಿಸುವುದಿಲ್ಲ. ಮುಂದೆ ಕನ್ನಡ ಚಿತ್ರರಂಕ್ಕೆ ಖಂಡಿತ ಕೆಲವು ಸಂಕಷ್ಟಗಳಂತೂ ಇವೆ. ಅದಕ್ಕಾಗಿ ನಾವು ಈಗಿನಿಂದಲೇ ಸಿದ್ಧರಾಗದೇ ಹೋದರೆ ಎದುರಿಸುವುದು ಕಷ್ಟವಾಗಬಹುದು.

—ಡಿ. ಸತ್ಯಪ್ರಕಾಶ್, ಚಲನಚಿತ್ರ ನಿರ್ದೇಶಕ



ನಟಿಸಿರುವ ಈ ಸಿನಿಮಾ ಗಟ್ಟಿಯಾದ ಥ್ರಿಲ್ಲರ್ ಎಳೆಯನ್ನು ಅಷ್ಟೇ ಗಟ್ಟಿಯಾಗಿ ಕಟ್ಟಿದ ಸಿನಿಮಾ. ಆದರೆ ಈ ಗಟ್ಟಿತನ ಪ್ರೇಕ್ಷಕನನ್ನು ಮುಟ್ಟಲೇ ಇಲ್ಲ. ‘ಜಂಟಲ್‌ಮನ್’ ಕೂಡ ಪ್ರೇಕ್ಷಕನ ಆಶೀರ್ವಾದ ಸಿಗದೆ ಮರೆಯಾಗಿಹೋದ.

‘ಟಗರು’ ಸಿನಿಮಾ ನಂತರ ಡಾಲಿ ಧನಂಜಯ್ ಅವರನ್ನು ಇಟ್ಟುಕೊಂಡು ಸೂರಿ ನಿರ್ದೇಶಿಸಿದ ‘ಪಾಪ್‌ಕಾರ್ನ್ ಮಂಕಿ ಟೈಗರ್’ ಹೆಸರಿನಿಂದಷ್ಟೇ ಅಲ್ಲ, ತಯಾರಿಕೆಯ ಪ್ರತಿ ಹಂತದಲ್ಲಿಯೂ ಸುದ್ದಿ ಮಾಡುತ್ತಲೇ ಬಂದಿದ್ದ ಸಿನಿಮಾ. ಅದರ ‘ಮಾದೇವಾ..’ ಹಾಡು ಈಗಲೂ ಹಲವು ತರುಣ ತರುಣಿಯರ ಮೊಬೈಲ್ ರಿಂಗ್‌ಟೋನ್ ಆಗಿ ಉಳಿದುಕೊಂಡಿದೆ. ರಕ್ತದಲ್ಲಿ ಕಲಾಕೃತಿಯನ್ನು ಕಟ್ಟುವ, ಕ್ರೌರ್ಯದಲ್ಲಿಯೇ ಕುಸುರಿ ಮೂಡಿಸುವ ‘ಸೂರಿಯಿಸಂ’, ಟಗರು ಸಿನಿಮಾದಷ್ಟು ‘ಪಾಪ್‌ಕಾರ್ನ್’ನಲ್ಲಿ ಕ್ಲಿಕ್ ಆಗಲಿಲ್ಲ. ಬಿಡುಗಡೆಯಾಗಿ ಮೂರು ವಾರಗಳ ಹೊತ್ತಿಗೆ ಲಾಕ್‌ಡೌನ್ ಘೋಷಣೆಯಾಗಿದ್ದೂ ಸಿನಿಮಾದ ಹಿನ್ನಡೆಗೆ ಒಂದು ಕಾರಣ ಎಂದು ಸೂರಿ ಅವರೇ ಹೇಳಿಕೊಂಡರು.

ಫೆ. 28ರಂದು ಬಿಡುಗಡೆಯಾದ ರಾಧಾಕೃಷ್ಣ ರೆಡ್ಡಿ ನಿರ್ದೇಶನದ, ಪಿಆರ್‌ಕೆ ಪ್ರೊಡಕ್ಷನ್ ಅಡಿಯಲ್ಲಿ ಪುನೀತ್ ರಾಜ್‌ಕುಮಾರ್ ನಿರ್ಮಾಣ ಮಾಡಿದ ‘ಮಾಯಾಬಜಾರ್’ ಸಿನಿಮಾ ಈ ವರ್ಷ ತೆರೆಕಂಡ ಗಮನಾರ್ಹ ಸಿನಿಮಾಗಳಲ್ಲಿ ಒಂದು ಎನ್ನುವುದರಲ್ಲಿ ಅನುಮಾನವಿಲ್ಲ. ಹಲವು ಕಥನದ ಎಳೆಗಳನ್ನು ಸೇರಿಸಿ ಹೆಣೆದ ಈ ಚಿತ್ರ ಒಳ್ಳೆತನ–ಕೆಟ್ಟತನ, ಪ್ರಾಮಾಣಿಕತೆ–ಅಪ್ರಾಮಾಣಿಕತೆ, ಮಾನವೀಯತೆ–ಕ್ರೌರ್ಯ ಹೀಗೆ ಹಲವು ಮೌಲ್ಯಗಳ ಒಪ್ಪಿತ ವ್ಯಾಖ್ಯಾನವನ್ನು ಜನಪ್ರಿಯ ಮಾದರಿಯಲ್ಲಿ, ಭಾವುಕ ತಳಹದಿಯಲ್ಲಿಯೇ ಪ್ರಶ್ನಿಸುತ್ತದೆ.

ಇಷ್ಟು ಬಿಟ್ಟರೆ ಉಳಿದವು, ‘ಬಂದ ಪುಟ್ಟ ಹೋದ ಪುಟ್ಟ’ಗಳೇ. ಚಿತ್ರಮಂದಿರಗಳಲ್ಲಿ ತಾಳಿಕೆ ಕಾಣುವ ಆಯಾಮದಿಂದಷ್ಟೇ ಅಲ್ಲ, ಗುಣಮಟ್ಟದ ದೃಷ್ಟಿಯಿಂದಲೂ ಅಚ್ಚರಿಗೊಳಿಸುವಂಥ ಪ್ರಯತ್ನಗಳು ನಡೆಯಲಿಲ್ಲ ಎಂದೇ ಹೇಳಬೇಕು.

### ಹೀಗೊಂದು ನಿರ್ವಾತ, ಮಧ್ಯಂತರ

ಕೊರೊನಾ ಕಾರಣಕ್ಕೆ ಮಾರ್ಚ್ ಕೊನೆಯ ವಾರದಿಂದ ಮುಚ್ಚಿಕೊಂಡ ಜಗದ ಬಾಗಿಲು ತುಸುವಾದರೂ ಮಿಸುಕಾಡಲು ಶುರುವಾಗಿದ್ದು ಜೂನ್‌ನಲ್ಲಿ. ಆದರೆ ಅಷ್ಟರಲ್ಲಾಗಲೇ ಕೊರೊನಾ ವೈರಸ್ಸು ತನ್ನ ಕುಣಿತದ ಉಚ್ಛ್ರಾಯಸ್ಥಿತಿಯತ್ತ ನಡೆಯುತ್ತಿತ್ತು. ಆದ್ದರಿಂದ ಜನ ಮನೆಬಿಟ್ಟು ಹೊರಬರುವ ಪರಿಸ್ಥಿತಿ ಇರಲಿಲ್ಲ.

ಚಿತ್ರಮಂದಿರಗಳ ಬಾಗಿಲುಗಳು ಮುಚ್ಚಿದವು, ಚಿತ್ರರಂಗದ ಚಟುವಟಿಕೆಗಳು ಸ್ಥಗಿತಗೊಂಡವು, ಇನ್ನೇನು ಎಲ್ಲ ಮುಗಿಯಿತು ಎನ್ನುವ ಹೊತ್ತಿಗೆ ಮತ್ತೊಂದು ದಿಕ್ಕಿನಿಂದ ಮೊದಲೇ ಅರೆತೆರೆದಿದ್ದ ಕಿಟಕಿಯಲ್ಲಿ ಗಾಳಿ ನುಗ್ಗಿ ಪೂರ್ತಿ ತೆರೆದುಕೊಂಡಿತು. ಅಲ್ಲಿಂದ ಹೊರಗಿನ ಗಾಳಿ–ಬೆಳಕು ಎರಡೂ ಒಳಗೆ ಸುರಿಯತೊಡಗಿದವು. ಆ ಕಿಟಕಿಯ ಹೆಸರು ‘ಒಟಿಟಿ’. ಮನೆಯಲ್ಲಿಯೇ ಕೂತವರಿಗೆ ಟಿಕ್‌ಟಾಕ್‌ನಂಥ ಆ್ಯಪ್‌ಗಳನ್ನು ಬಿಟ್ಟರೆ ಮನರಂಜನೆಗೆ ಒದಗಿಬಂದಿದ್ದು ಈ ಒಟಿಟಿ ವೇದಿಕೆಗಳೇ. ಅದರಲ್ಲಿಯೂ ಅಮೆಜಾನ್ ಪ್ರೈಮ್ ಮತ್ತು ನೆಟ್‌ಫ್ಲಿಕ್ಸ್‌ನಂಥ ಜಾಗತಿಕ ಒಟಿಟಿ ವೇದಿಕೆಗಳು, ವೂಟ್, ಜೀ 5ನಂಥ ಮನರಂಜನಾ ವಾಹಿನಿಗಳ ಅಂಗವಾಗಿ ರೂಪುಗೊಂಡ ಒಟಿಟಿಗಳು ಜೀವಂತಿಕೆಯಿಂದ ನಳನಳಿಸಲಾರಂಭಿಸಿದವು.

ಹಿಂದಿನ ಅಮಿತಾಭ್ ಬಚ್ಚನ್, ಆಯುಷ್ಮಾನ್ ಖುರಾನಾ ಅವರಂಥ ಮೇರುನಟರಿದ್ದ ‘ಗುಲಾಬೊ ಸಿತಾಬೊ’ದಂಥ ಸಿನಿಮಾಗಳೇ ಚಿತ್ರಮಂದಿರಗಳ ಹಂಗುತೊರೆದು ಒಟಿಟಿಯಲ್ಲಿ ನೇರವಾಗಿ ಬಿಡುಗಡೆಯಾದವು ಎಂದರೆ ಅದರ ಜನಪ್ರಿಯತೆ ಏರಿದ ಪರಿಯನ್ನು ಊಹಿಸಿಕೊಳ್ಳಬಹುದು. ಹಾಗೆ ನೋಡಿದರೆ ಕನ್ನಡ ಚಿತ್ರರಂಗದವರು ಚಿತ್ರಮಂದಿರಗಳ ಬಂಧ ಬಿಡಿಸಿಕೊಂಡು ಒಟಿಟಿಯತ್ತ ಗಮನಹರಿಸಿದ್ದು ತಡವಾಗಿಯೇ. ಅದು ಈಗಲೂ ಹೇಳಿಕೊಳ್ಳುವ ಪ್ರಮಾಣದಲ್ಲಿ ಇಲ್ಲ.

ಮಾರ್ಚ್ ಮಧ್ಯಭಾಗದಲ್ಲಿ ಚಿತ್ರಮಂದಿರಗಳ ಬಾಗಿಲು ಹಾಕಿಕೊಂಡ ಮೇಲೆ, ಕನ್ನಡ ಸಿನಿಮಾಪ್ರಿಯರಿಗೆ ಮತ್ತೊಂದು ಹೊಸ ಸಿನಿಮಾ ನೋಡಲು ಸಿಕ್ಕಿದ್ದು ಜುಲೈ ಮಧ್ಯಭಾಗದಲ್ಲಿಯೇ. ಚಿತ್ರಮಂದಿರದಲ್ಲಿ ಎರಡು ಶೋಗಳ ನಡುವಿನ ಅವಧಿಯಲ್ಲಿ ಬೆಳ್ಳಿತೆರೆಯ ಮೇಲೆ ಆವರಿಸುವ ಜೀವಹೀನ ಮೌನವೇ ಈ ನಡುವಿನ ನಾಲ್ಕು ತಿಂಗಳ ಅವಧಿಯಲ್ಲಿ ಆವರಿಸಿತ್ತು.

ಒಟಿಟಿಯಲ್ಲಿಯೇ ನೇರವಾಗಿ ಸಿನಿಮಾ ಬಿಡುಗಡೆ ಮಾಡುವ ಧೈರ್ಯವನ್ನು ಮೊದಲು ತೋರಿದ್ದು ಪಿಆರ್‌ಕೆ ಪ್ರೊಡಕ್ಷನ್‌ನ ಪುನೀತ್ ರಾಜ್‌ಕುಮಾರ್ ಅವರೇ. ಪುನೀತ್ ಅವರ ಈ ಧೈರ್ಯ ಹುಂಬತನದ್ದೇನಾಗಿರಲಿಲ್ಲ. ಜುಲೈ 17ಕ್ಕೆ, ರಘು ಸಮರ್ಥ ನಿರ್ದೇಶನದ ‘ಲಾ’ ಮತ್ತು ಜುಲೈ 24ಕ್ಕೆ ಪನ್ನಗ ಭರಣ ನಿರ್ದೇಶನದ ‘ಫ್ರೆಂಚ್ ಬಿರಿಯಾನಿ’ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾದವು. ಕಟೌಟುಗಳ ಎತ್ತರವಿಲ್ಲದೆ, ಕುಸುಮಗಳಿಂದ ಮಾಡಿದ ಶೀರ್ಷಿಕೆ ಫಲಕಗಳಿಲ್ಲದೆ, ಪಟಾಕಿ, ಡೋಲುಗಳ



ಸ್ಯಾಂಡಲ್‌ವುಡ್ 20-21